## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2022-23ನೇ ಸಾಲಿಗೆ ಡೇ-ನಲ್ಮ್ ಕ್ರಿಯಾ ಯೋಜನೆಯನ್ನು ಮುಂದುವರೆಸಲು ಅನುಮತಿ ನೀಡುವ ಕುರಿತು.

**ಓದಲಾಗಿದೆ:** ಅಭಿಯಾನ ನಿರ್ದೇಶಕರು, ಡೇ-ನಲ್ಮ್ ಇವರ ಪತ್ರ ಸಂಖ್ಯೆ: MD 66 DAY-NULM 2021-22, ದಿನಾಂಕ:22.03.2022.

*******

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ, ಅಭಿಯಾನ ನಿರ್ದೇಶಕರು, ಡೇ-ನಲ್ಮ್ ಇವರು, 2022-23 ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ DAY-NULM ಯೋಜನೆಗೆ ಒಟ್ಟು ರೂ.4000.00 ಲಕ್ಷಗಳ ಪೈಕಿ ಕೇಂದ್ರದ ಪಾಲಾದ ರೂ.3000.00 ಲಕ್ಷಗಳನ್ನು ಲೆಕ್ಕಶೀರ್ಷಿಕೆ: 3604-00-191-5-52ರಡಿ ಹಾಗೂ ರಾಜ್ಯಪಾಲಾದ ರೂ.1000.00 ಲಕ್ಷಗಳನ್ನು ಲೆಕ್ಕಶೀರ್ಷಿಕೆ 3604-00-191-5-53ರಡಿ ಒದಗಿಸಲಾಗಿದೆ. ಆದರೆ DAY-NULM ಯೋಜನೆಗೆ ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರ ಇಲಾಖೆಯ ಮಾರ್ಗಸೂಚಿಯನ್ವಯ 2022-23ನೇ ಸಾಲಿಗೆ ಒಟ್ಟು ರೂ.9842.27 ಲಕ್ಷಗಳ ಕ್ರಿಯಾಯೋಜನೆಯನ್ನು ತಯಾರಿಸಿ ದಿನಾಂಕ:22.03.2022ರಂದು ಕೇಂದ್ರದ ಅನುಮೋದನೆಗೆ ಸಲ್ಲಿಸಲಾಗಿದೆ. ಹಾಗೂ ಕೇಂದ್ರ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗಿದ್ದು, ಕ್ರಿಯಾಯೋಜನೆಗೆ ಅನುಮೋದನೆ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 50 ಉಜೀಇ 2022, ಬೆಂಗಳೂರು, ದಿನಾಂಕ: 21.04.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2022-23 ನೇ ಸಾಲಿನ ಡೇ-ನಲ್ಮ್ ಕ್ರಿಯಾ ಯೋಜನೆಯಡಿ ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಿದ ಕ್ರಿಯಾ ಯೋಜನೆಗೆ ರೂ.9842.27 ಲಕ್ಷ (ರೂ.ಒಂಬತ್ತುಸಾವಿರದ ಎಂಟುನೂರ ನಲವತ್ತೆರಡು ಲಕ್ಷಗಳು ಮತ್ತು ಇಪ್ಪತ್ತೇಳು ಸಾವಿರಗಳು ಮಾತ್ರ) ಗಳನ್ನು ಭರಿಸಿಕೊಂಡು, ಅನುಷ್ಠಾನಗೊಳಿಸಿ ಮುಂದುವರೆಸಲು ಸರ್ಕಾರವು ಷರತ್ತುಬದ್ಧ ಮಂಜೂರಾತಿ ನೀಡಿ ಆದೇಶಿಸಿದೆ.

| Proposed outlay under DAY-NULM – 2022-23 under the HoA: 3604-00-191-5-52 (Central Share) and 3604-00-191-5-53 (State Share) | | | | |
|---|---|---|---|---|
| | | | | Rs. in lakhs |
| Sl. No | NULM Component | STATE AAP likely to be approved by EC | | |
| | | Proposed allocation | Central Share 60% | State Share 40% |
| 1 | 2 | 3 | 4 | 5 |
| 1 | SM&ID | 3810.57 | 2286.34 | 1524.23 |
| 2 | EST&P | 1388.75 | 833.25 | 555.50 |
| 3 | SEP | 587.00 | 352.20 | 234.80 |
| 4 | CB&T | 692.13 | 415.28 | 276.85 |
| 5 | SUSV | 502.10 | 301.26 | 200.84 |
| 6 | SUH | 2327.72 | 1396.63 | 931.09 |
| 7 | A&OE | 250.00 | 150.00 | 100.00 |
| 8 | IEC | 284.00 | 170.40 | 113.60 |
| | Total | **9842.27** | **5905.36** | **3936.91** |

....2/-

ಷರತ್ತು:-

**1. ಕೇಂದ್ರ ಸರ್ಕಾರದಿಂದ ಈ ಯೋಜನೆಗೆ ಅನುದಾನ ಬಿಡುಗಡೆಯಾದ ನಂತರ ಸದರಿ ಯೋಜನೆಗೆ ಅನುದಾನ ಬಿಡುಗಡೆ ಮಾಡಲಾಗುವುದು. ಹಾಗೂ ಕೇಂದ್ರ ಸರ್ಕಾರದಿಂದ ಅನುದಾನವು ಸ್ವೀಕೃತಿಯಾಗದ ಹೊರತು ಯಾವುದೇ ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸಲಾಗುವುದಿಲ್ಲ.**

2. ಸರ್ಕಾರದಿಂದ ಹಣ ಬಿಡುಗಡೆಯಾದ ನಂತರ ಸದರಿ ಮೊತ್ತವನ್ನು PFMS ನಲ್ಲಿನ SNA ಖಾತೆಗಳಿಗೆ ಜಮಾ ಮಾಡಿ ನಂತರ child account ಗಳಿಗೆ ವರ್ಗಾಯಿಸುವುದು.

3. ಈ ಆದೇಶದಲ್ಲಿ ಮುಂದುವರೆಸಿರುವ ಕಾರ್ಯಕ್ರಮಗಳಲ್ಲಿ ಯಾವುದೇ ಹೊಸ ಯೋಜನೆಗಳ ಪ್ರಸ್ತಾವನೆಗಳು ಇದ್ದಲ್ಲಿ, ಸರ್ಕಾರದ ಪ್ರತ್ಯೇಕ ಮಂಜೂರಾತಿಯನ್ನು ಪಡೆದ ನಂತರವೇ ಅನುಷ್ಠಾನಗೊಳಿಸತಕ್ಕದ್ದು.

4. ಮುಂದುವರೆದ ಯೋಜನೆಗಳಡಿಯಲ್ಲಿ ಉಪಕರಣ / ಗಣಕಯಂತ್ರ ಇತ್ಯಾದ ಖರೀದಿಗಳಿಗೆ ಸಂಬಂಧಿಸಿದಂತೆ ಎಲ್ಲಾ ಖರೀದಿ ನಿಯಮಗಳನ್ನು, ಇ-ಆಡಳಿತ ಇಲಾಖೆಯ ಆದೇಶಗಳು, ತಾಂತ್ರಿಕ ಸಮಿತಿ ಒಪ್ಪಿಗೆ, ಟ್ಯಾಪ್‌ನ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999ರ ಮತ್ತು ಅದರಡಿಯಲ್ಲಿನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

5. ಹುದ್ದೆಗಳನ್ನು ಸೃಜಿಸುವ ಹಾಗೂ ಹೊಸ ವಾಹನಗಳನ್ನು ಖರೀದಿಸುವ ಬಗ್ಗೆ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆಯತಕ್ಕದ್ದು.

6. ಆರ್ಥಿಕ ಮಿತವ್ಯಯ ಆದೇಶ ಹಾಗೂ ವೆಚ್ಚಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ 298 ವೆಚ್ಚ-9/2022 ದಿನಾಂಕ: 19-04-2022 ರಲ್ಲಿ ನೀಡಿರುವ ಷರತ್ತುಬದ್ಧ ಸಹಮತಿಯ ಮೇರೆಗೆ ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್ 45 ಎಂಇಡಿ 2022, ದಿ: 12-04-2022 ರಲ್ಲಿ ಸಹಮತಿಸಿರುವಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

21/04/2022

(ರಂಗನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು (ಎ&ಇ), (ಜಿ&ಎಸ್.ಎಸ್.ಎ), (ಇ&ಆರ್.ಎಸ್.ಎ), ಬೆಂಗಳೂರು.
2. ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ, ಬೆಂಗಳೂರು
3. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಬೆಂಗಳೂರು.

..3/-

4. ಖಜಾನಾಧಿಕಾರಿ, ರಾಜ್ಯಹುಜೂರ್ಖಜಾನೆ, ಬೆಂಗಳೂರು.
5. ನಿರ್ದೇಶಕರು, ವಿಶೇಷ ಕೋಶ, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಉಪ ನಿರ್ದೇಶಕರು, ಖಜಾನೆ, ಎನ್.ಎಂ.ಸಿ., ಖನಿಜ ಭವನ, ರೇಸ್‌ಕೋರ್ಸ್‌ರೋಡ್,ಬೆಂಗಳೂರು.
7. ಸರ್ಕಾರದಅಧೀನ ಕಾರ್ಯದರ್ಶಿ, ಆರ್ಥಿಕಇಲಾಖೆ (ವೆಚ್ಚ 3 & 9), ವಿಧಾನಸೌಧ, ಬೆಂಗಳೂರು.
8. ಜನಶಕ್ತಿ & ಉದ್ಯೋಗ ವಿಭಾಗ, ಯೋಜನಾ ಇಲಾಖೆ, ಬೆಂಗಳೂರು.

<u>ಮಾಹಿತಿಗಾಗಿ:-</u>

1. ಮಾನ್ಯ ಉನ್ನತ ಶಿಕ್ಷಣ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕತಂತ್ರಜ್ಞಾನ, ವಿಜ್ಞಾನ & ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ & ಜೀವನೋಪಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ & ಜೀವನೋಪಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ & ಜೀವನೋಪಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಶಾಖಾಧಿಕಾರಿ, ಶಾಖೆ-1, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ & ಜೀವನೋಪಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.